2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.212/2025

ಪಿ.ಡಬ್ಲ್ಯೂಃ 3

ಸಿ.ಡಬ್ಲ್ಯೂಃ 3

| | |
|---|---|
| ಸಾಕ್ಷಿಯ ಹೆಸರುಃ | ಶ್ರೀ. ಮಹೇಶ ದೇವಪ್ಪಾ ಪಾಟೀಲ |
| ತಂದೆಯ ಹೆಸರುಃ | ದೇವಪ್ಪಾ ಪಾಟೀಲ |
| ವಯಸ್ಸುಃ | 32 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಬೆನಕನಹಳ್ಳಿ ತಾಃ ಬೆಳಗಾವಿ |

**ದಿನಾಂಕಃ 23.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಈಗ್ಗೆ ಜುಲೈ 2025 ರಲ್ಲಿ ಬೆಳಗ್ಗೆ 10.00 ಗಂಟೆಗೆ ನನ್ನನ್ನು ಹಾಗೂ ಚಾಸಾ-2 ರವರನ್ನು ಪಂಚನಾಮೆಗಾಗಿ ಸುಳಗಾದ ಬಳಿಯಿರುವ ಸರ್ವೇ ನಂಃ55 ರ ಜಮೀನಿಗೆ ಚಾಸಾ-13 ರವರು ಕರೆಸಿದ್ದರು. ಆ ಕಾಲಕ್ಕೆ ಚಾಸಾ-13 ಹಾಗೂ ಕಾಕತಿ ಪೋಲಿಸರು ಸಹ ಅಲ್ಲಿದ್ದರು. ಆ ಕಾಲಕ್ಕೆ ಚಾಸಾ-13 ರವರು ಜಾಗವನ್ನು ತೋರಿಸಿ ಇದೇ ಜಾಗದಲ್ಲಿಯೇ ತಮ್ಮ ಲೇಔಟನಲ್ಲಿ ಕೆಲಸ ಮಾಡಲು ಬಂದ ಒಬ್ಬ ವ್ಯಕ್ತಿಯ ಕೊಲೆಯಾಗಿದ್ದು ಎಂದು ತೋರಿಸಿರುತ್ತಾರೆ. ಆ ಕಾಲಕ್ಕೆ ಪೋಲಿಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಲು ಬಂದಿರುತ್ತಾರೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ಆ ಪಂಚನಾಮೆ ಎಂದು ಗುರುತಿಸಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ಈಗ ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ ಎರಡು ಫೋಟೊಗಳನ್ನು ನೋಡಿ ಇದು ಪಂಚನಾಮೆಯ ಕಾಲಕ್ಕೆ ತೆಗೆದಿದ್ದ ಫೋಟೊಗಳು ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಾವು ಸ್ಥಳಕ್ಕೆ ಹೋದಾಗ ತನಿಖಾಧಿಕಾರಿ ಪಂಚನಾಮೆಗೆ ಬನ್ನಿ ಎಂದು ನೋಟಿಸ ನೀಡಿದ್ದರು, ಅದಕ್ಕೆ ನಾವು ಸಹ ಒಪ್ಪಿಗೆಯನ್ನು ಸೂಚಿಸಿದ್ದೇವು. ಸಾಕ್ಷಿಯು ಈಗ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗ

ಕ್ರಮವಾಗಿ ನಿಪಿ–10 ಮತ್ತು ನಿಪಿ–11 ಎಂದು, ಸಾಕ್ಷಿಯ ಸಹಿಗಳನ್ನು ಈಗ ನಿಪಿ–10(ಎ) ಮತ್ತು ನಿಪಿ–11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎಲ್.ಎಂ.ಎಚ್. ವಕೀಲರಿಂದಃ**

2. ಕನ್ನಡ ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆದರೆ ಸ್ವಲ್ಪ ಸ್ವಲ್ಪ ಮಾತನಾಡುತ್ತೇನೆ. ನಾನು ಹಾಗೂ ಚಾಸಾ–13 ರವರು ಸ್ನೇಹಿತರು ಎನ್ನುವುದು ಸರಿಯಲ್ಲ. ಆದರೆ ಅವರು ನನಗೆ ಪರಿಚಯವಿದ್ದಾರೆ. ಚಾಸಾ–13 ಯಾವುದಾದರೂ ಕೆಲಸಕ್ಕೆ ಕರೆದರೆ ನಾವು ಹೋಗುತ್ತೇವೆ ಹಾಗೂ ಸಹಾಯ ಕೇಳಿದರೆ ಮಾಡುತ್ತೇವೆ ಎನ್ನುವುದು ಸರಿ. ನೋಟಿಸನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ನಿಪಿ–10 ರಲ್ಲಿ ಯಾವ ದಿನ ಎಲ್ಲಿಗೆ ಬರಬೇಕು ಎಂದು ಬರೆದಿಲ್ಲ ಎಂದರೆ ಸರಿ. ಘಟನಾ ಸ್ಥಳದ ಜಾಗ ಚಾಸಾ–13 ರವರ ಮಾಲೀಕತ್ವದಲ್ಲ ಎನ್ನುವುದು ಸರಿಯಲ್ಲ. ನಿಪಿ–8 ರಲ್ಲಿ ಏನು ಬರೆದಿದೆ ಎಂದು ನಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಕಾರಣ ಅದನ್ನು ನಮಗೆ ಓದಿ ಹೇಳಿರುತ್ತಾರೆ. ನಾವು ಪಂಚನಾಮೆಗೆ ಹೋಗಿದ್ದ ಜಾಗ ಖಾಲಿ ಇದೆ ಎನ್ನುವುದು ಸರಿ. ಸಾಕ್ಷಿ ಹೇಳುತ್ತಾರೆ ಲೇಔಟನಲ್ಲಿ ಒಂದು ಶೆಡ್ ಇದೆ ಎಂದು ಹೇಳುತ್ತಾರೆ. ಪಂಚನಾಮೆಯ ವಿಚಾರಗಳನ್ನು ಹೀಗೇಯೇ ಬರೆಯಿರಿ ಎಂದು ನಾನೇನು ಪೋಲಿಸರಿಗೆ ಹೇಳಿ ಬರೆಸಿಲ್ಲ ಎಂದರೆ ಸರಿ. ನಾನು ನಿಪಿ–8 ಕ್ಕೆ ಪೋಲಿಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ  ಎಂದರೆ ಸರಿಯಲ್ಲ. ನಾನು ಪಂಚನಾಮೆ ಮಾಡಿದ ಜಾಗದ ಚಕ್ಕುಬಂದಿಯನ್ನು ಹೇಳಲು ಬರುವುದಿಲ್ಲ. ಸಾಕ್ಷಿ ಹೇಳುತ್ತಾರೆ. ಆ ಸ್ಥಳದ ಸುತ್ತಮುತ್ತಲೂ ಖಾಲಿ ಜಾಗಗಳಿವೆ ಎಂದು ಹೇಳುತ್ತಾರೆ. ನಾನು ಯಾವುದೇ ಪಂಚನಾಮೆಗೆ ಭಾಗಿಯಾಗಿಲ್ಲ. ಆದರೆ ಪೋಲಿಸರ ಮಾತು ಕೇಳಿ ಅವರ ಪ್ರಕರಣಕ್ಕೆ ಅನುಕೂಲವಾಗಲೇಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಘಟನಾ ಸ್ಥಳದ ಬಳಿ ಯಾವುದೇ ಭಾವಿ ಇಲ್ಲ. ಆದರೆ ಅದು ಸ್ವಲ್ಪ ದೂರದಲ್ಲಿದೆ. ನಿಪಿ–9 ರಲ್ಲಿ ಕಾಣುವ ಶೆಡ್ ಲೇಔಟನ ಒಳಗೆ ಇಲ್ಲ. ಅದು ಆ ಬಡಾವಣೆಯ ಪಕ್ಕದ ಜಮೀನಿನಲ್ಲಿದೆ ಎಂದು ಹೇಳುತ್ತಾರೆ. ಲೇಔಟ ಕಡೆಗೆ ಸಾಯಂಕಾಲ ಜನರು ಪಾರ್ಟಿ ಮಾಡಲು ಹೋಗುತ್ತಾರೆ ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ನಾನು ಹೇಳಿದಂತಹ ಜಾಗದಲ್ಲಿ ಪಂಚನಾಮೆಯಾಗಿಲ್ಲ, ಯಾವುದೋ ಖಾಲಿ ಜಾಗದಲ್ಲಿ ನಿಂತು ಫೋಟೊ ತೆಗೆಯಿಸಿ ಹಾಕಿದ್ದಾರೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.